




ಹೇಳ್ತಾರೆ... (ಕೈಯಲ್ಲಿ ಹಿಡಿದಿದ್ದ ಮೊಬೈಲ್ ತೋರಿಸಿದ್ದಕ್ಕೇ ಗೊತ್ತಾದದ್ದು ವಿಷ್ಯ ಯಾವುದರ ಮೇಲೆ ಅಂತ). ಎಲ್ರಿಗೂ ಇದ್ರಿಂದ್ಲೇ ಬೆಳಗು, ಇದ್ರಿಂದ್ಲೇ ರಾತ್ರಿ. (ಇವ್ರು ಬಲೂ ಪಾಕಡಾ, ಗುಡ್ ಮಾರ್ನಿಂಗ್, ಗುಡ್ ನೈಟ್ ಅನ್ನೋದನ್ನ ಅವಾಯಿಡ್ ಮಾಡಿದ್ಲಲ್ಲ) ಇದಿಲ್ಲ ಅಂದ್ರೆ ಆಗೋದೇ ಇಲ್ಲ, ಊಟ ತಿಂಡಿ, ಕೊನೆಗೆ ಉಸಿರಾಡೋದನ್ನಾದ್ರೂ ಮರೀಬಹ್ದು. ಆದ್ರೆ ಇದನ್ನ ಮಾತ್ರ ಮರ್ಯೋದೇ ಇಲ್ಲ. ಮಲ್ಕೋಬೇಕಾದ್ರೆ ದಿಂಬಿನ ಕೆಳಗೆ ಇಟ್ಕೋತಾರೆ. ಅಷ್ಟೇ ಏಕೆ ವಾಶ್‌ರೂಮೂ ಬಿಡಲ್ಲ ಅಲ್ಲೂ ತೊಗೊಂಡ್ಹೋಗ್ತಾರೆ. ಇನ್ನು ಜಗತ್ತಿನ ಎಲ್ಲಾ ಮಾಹಿತೀನೂ ಇದ್ರಲ್ಲೇ ಸಿಗುತ್ತೆ...'

ಅಳ್ಳೂ ಸುರ್ದೂ ಪದಗಳನ್ನ ಎಚ್ಚರಿಕೆಯಿಂದಲೇ ಉಪಯೋಗಿಸಿ ಚರವಾಣಿ ಪದ ಹೇಳೋಕಾಗ್ದೇ 'ಇದು, ಇದನ್ನ' ಅಂತ ಹೇಳ್ತಾ ನಿಧಾನವಾಗಿ ಮಾತಾಡೋದು ನೋಡಿ ಇದಂತೂ ಅಲ್ಲಲ್ಲಾ! ಇವಳಂತೂ ಗೆದ್ದೇ ಗೆಲ್ತಾಳೆ ಅನ್ನಿಸಿತ್ತು. ಥಟ್ಟನೆ ಕೂತವ್ರಿಬ್ರೂ ಹೋ ಅಂತ ಅರ್ಚೋಕೆ ಶುರು ಹಚ್ಕೊಂಡಾಗ ನಂಗಂತೂ ಯಾಕಂತ್ಲೇ ಗೊತ್ತಾಗ್ಲಿಲ್ಲ. 'ಅದ್ಯಾಕೆ ಹಾಗ್ ಕೂಗ್ತಿದ್ದೀರಿ? ಹೆಂಚಿನ ಮನೆಯಾಗಿದ್ರೆ ಇಷ್ಟೊತ್ತಿಗಾಗ್ಲೇ ಹಾರ್ಹೋಗಿರೋದು. ಅಕ್ಕಪಕ್ಕದವ್ರು ಹತ್ರ ಬೈಸ್ಕೊಳ್ಳೋಕೆ ಆಸೇನೇನ್ರೇ... ನಿಮ್ಜೊತೇಗೆ ನನ್ನೂ ಉಗೀತಾ ಮಂಗ್ಳಾರ್ತಿ ಎತ್ತತಾರಷ್ಟೇ... ಏನಾಯ್ತಿವಾಗ?' ಎಂದೆ.

'ಅಯ್ಯೋ ಆಂಟೀ! ಅವ್ಳು ವಾಶ್ರೂಮು ಪದ ಯೂಸ್ ಮಾಡಿದ್ಲು. ಅವ್ಳೂ ಔಟು!' ಈ ವಾಕ್ಯಕ್ಕೆ ಮತ್ತದೇ ಮುಕ್ತ ಸ್ಥಾಯಿಯ ಹೋಕಾರ. ಮೂರನೇಯವ್ಳು 'ಆಂಟೀ, ಪ್ಯೂರ್ ಕನ್ನಡದಲ್ಲಿ ಮಾತಾಡೋಕೆ ನಂಗಂತೂ ಆಗಲ್ಲ. ನಾ ಕ್ವಿಟ್ ಮಾಡ್ತೀನಿ' ಸೇಫಾಗಿ ಹಿಂದೆ ಸರ್ಕೊಂಡ್ಲು. ಹತ್ತು ನಿಮಿಷ ಬಿಡಿ, ಒಂದೆರಡು ನಿಮಿಷವೂ ನಿರರ್ಗಳವಾಗಿ ಕನ್ನಡದಲ್ಲಿ ಮಾತಾಡೋಕೆ ಆಗ್ದೇ ಕಂಗ್ಲೀಷಿನ ಬಳಕೆಗೆ ಬೇಸರವಾದ್ರೂ ಪರ್ಸು ಸೊರಗದೇ ಉಬ್ಬಿಕೊಂಡೇ ಇದ್ದದ್ದಕ್ಕೆ ನಾನಂತೂ ಒಳ್ಗೊಳ್ಗೇ ಸಂಭ್ರಮಿಸಿದ್ದೆ.

ಇನ್ನು ಜನಮಾನಸದ ಮೇಲೆ ಹೆಚ್ಚು ಪ್ರಭಾವ ಬೀರುವ ದೃಶ್ಯ ಮಾಧ್ಯಮದವ್ರ ಅಲ್ಪಪ್ರಾಣ ಮಹಾಪ್ರಾಣಗಳ ಮುಲಾಜಿಲ್ಲದ ಬದಲಾಯಿಸುವಿಕೆ; ಅ ಮತ್ತು ಹಕಾರಗಳ ನಿರ್ಭಿಡೆಯ ಸ್ಥಾನಪಲ್ಲಟಕ್ಕೆ ನನ್ನ ಅರಿವಿನ ಕನ್ನಡವನ್ನೇ ಕೆಲವೊಮ್ಮೆ ಸಂದೇಹಿಸುತ್ತಿದ್ದೆ. ನಮ್ಮ ಅಕ್ಷರಮಾಲೆಯಲ್ಲಿನ 'ಜ್ಞ' ಅಕ್ಷರ 'ಗ್ನ' ಆಗಿ ಮಾರ್ಪಟ್ಟು ತನ್ನ ಅಸ್ತಿತ್ವವನ್ನೇ ಬಲಿದಾನ ಮಾಡಿರೋದಕ್ಕೆ ಕನ್ನಡದ ಸೋ ಕಾಲ್ಡ್ ಪ್ರಸಿದ್ಧರೂ, ಘಟಾನುಘಟಿಗಳೂ ಕಾಂಕ್ರೀಟು ಸುರ್ದು ಮೇಲೇಳ್ದಿರೋ ಹಾಗೆ ಮಾಡ್ಬಿಟ್ಟಿದ್ದಾರೆ. ಈ ನಿಟ್ಟಿನಲ್ಲಿ ಅವ್ರ ಕೊಡುಗೆ ಹೀಗೇ ಅಂತ ಹೇಳೋಕ್ಕಾಗಲ್ಲ. ಜ್ಞಾನಕ್ಕೆ ಗ್ನಾನ; ಪ್ರಜ್ಞೆಗೆ ಪ್ರಗ್ನೆ; ಅಜ್ಞಾನಕ್ಕೆ ಅಗ್ನಾನ, ವಿಜ್ಞಾನಕ್ಕೆ ವಿಗ್ನಾನ ಅನ್ನೋದನ್ನೇ ಕೇಳೀ ಕೇಳಿ ಅದೆಷ್ಟು ಹೊಂದ್ಕೊಂಡಿದ್ದೀನಿ ಅಂದ್ರೆ ಕೆಲವೊಮ್ಮೆ ಕನ್ಫ್ಯೂಸಾಗಿ ನಿಘಂಟಿನ ಮೊರೆ ಹೋಗೋ ಸೀನಂತೂ ಇದ್ದದ್ದೇ. ನನ್ನ ಪರಿಸ್ಥಿತೀನೆ ಹೀಗಿರುವಾಗ ಆಂಗ್ಲ ಮಾಧ್ಯಮದ ಅಬ್ಬರದಲ್ಲಿ ಮುಳುಗ್ತಿರೋ ಕನ್ನಡದ ಕುಡಿಗಳನ್ನ ಹೆಕ್ಕಿ ಹುರಿದುಂಬಿಸೋ ಕೆಲ್ಸ ಮಾಡೋರು ಯಾರಾದ್ರೂ ಇದ್ದಾರೆಯೇ?

''ಅಯ್ಯೋ... ಅಕಾರವೋ, ಹಕಾರವೋ ಬದ್ಲಾಯ್ಸಿದ್ರೆ ನಷ್ಟವೇನಿಲ್ಲ. ನಿಮ್ ಗಂಟೇನು ಹೋಗುತ್ತೆ? ಅರ್ಥ ಆದ್ರಾಯ್ತು ತಾನೇ? ಅದಾಗೇ ಆಗುತ್ತೆ, ಆಗ್ತಿದೆ ಕೂಡ. ಇನ್ನು ಅಲ್ಪಪ್ರಾಣ, ಮಹಾಪ್ರಾಣ ಎಲ್ಲಿ ಬೇಕಾದ್ರೂ ಬಳಸ್ಕೊಳ್ಳಿ. ಕೊಳ್ಳೆ ಹೋಗೋದು ಏನಿದೆ? ನೋಡಿ, ರಾಷ್ಟ್ರಕವಿ ಕುವೆಂಪು ಅವ್ರೇ ಹೇಳಿದ್ದಾರಲ್ಲಾ, 'ಎಲ್ಲಾದರೂ ಇರು ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು... ಕನ್ನಡವೇ ಸತ್ಯ ಕನ್ನಡವೇ ನಿತ್ಯ...' ಅಂತ. ಎಂತಾದರೂ ಇರು ಅನ್ನೋಹಾಗೆ ಹೇಗೋ ಒಂದು, ಕನ್ನಡ ಅಂತ ಉಳ್ಕೊಂಡಿದ್ಯಲ್ಲಾ ಅದಕ್ಕೆ ಸಮಾಧಾನ ಪಡಿ ಸಾಕು'' ಅಂತಿದ್ದೀರಾ? ನೀವ್ಹೇಳೋದೂ ಸರಿ. ಕಂಗ್ಲೀಷೋ ಗಿಂಗ್ಲೀಷೋ ಒಟ್ನಲ್ಲಿ ರೂಪಾಂತರಗೊಂಡ ಕನ್ನಡವಾದ್ರೂ ಸರೀನೇ... ಉಳಿದಿದ್ಯಲ್ವಾ ಅಷ್ಟು ಸಾಕು ಈ ಜನ್ಮಕ್ಕೆ. ಗ್ನಾನೋದಯ ಮಾಡ್ಸಿದ್ದಕ್ಕೆ ತುಂಬಾನೇ ಥ್ಯಾಂಕ್ಸ್...

ಪ್ರತಿಕ್ರಿಯಿಸಿ: **feedback@sudha.co.in**